ಒಬ್ಬ ರಾಜನ ಬಳಿ ತುಂಬಾ ನಂಬಿಕಸ್ತನಾದ ಒಬ್ಬ ಸೇವಕನಿದ್ದನು. ಅವನ ಹೆಸರು ಜಾನ್. ಮಹಾರಾಣಿ ಬೇಗನೆ ತೀರಿಹೋಗಿದ್ದಳು. ತಾಯಿಯಿಲ್ಲದ ಪುಟ್ಟ ರಾಜಕುಮಾರನನ್ನು ಜಾನ್, ದುಃಖಿತ ರಾಜನಿಗೆ ಬೆಂಗಾವಲಾಗಿ ನಿಂತು ಆ ಮಗುವನ್ನು ತಾಯಿ ಇಲ್ಲ ಎನಿಸದಂತೆ ಪ್ರೀತಿಯಿಂದ ಪೋಷಿಸುತ್ತ, ರಾಜನ ಅಪಾರ ಪ್ರೀತಿ ಅಭಿಮಾನಗಳಿಗೆ ಪಾತ್ರನಾಗಿದ್ದನು. ರಾಜಕುಮಾರ ಸುಖವಾಗಿ ಬೆಳೆಯುತ್ತ, ರಾಜೋಚಿತವಾದ ವಿದ್ಯೆಗಳನ್ನು ಕಲಿತು ವೀರನೂ ಶೂರನೂ ಸುಂದರಾಂಗನೂ ಆಗಿ ನೋಡುವವರ ಕಣ್ಣಿಗೆ ಹಬ್ಬವಾಗಿದ್ದನು. ಅವನಿಗೆ ಶೀಘ್ರದಲ್ಲೇ ಲಗ್ನ ಮಾಡಬೇಕೆಂಬ ಅಪೇಕ್ಷೆಯಿಂದ ರಾಜ ದೇಶ ವಿದೇಶಗಳ ಸುಂದರ ರಾಜಪುತ್ರಿಯರ ಭಾವಚಿತ್ರಗಳನ್ನು ತರಿಸಿ ತನ್ನರಮನೆಯ ಕೋಣೆಯಲ್ಲಿ ಸಂಗ್ರಹಿಸಿಟ್ಟದ್ದನು.

ಹೀಗಿರಲು ಒಂದು ಸಲ ಏನೋ ಕಾಯಿಲೆಯಾಗಿ ರಾಜನಿಗೆ ಇದ್ದಕಿದ್ದ ಹಾಗೆ ಹುಷಾರು ತಪ್ಪಿತು. ಅವನಿಗೆ ತಾನಿನ್ನು ಹೆಚ್ಚು ದಿನ ಬದುಕುವುದಿಲ್ಲ ಎಂದು ಮನಸ್ಸಿಗೆ ತೋರಿತು. ಅವನು ತನ್ನ ಆಪ್ತ ಸೇವಕ ಜಾನನನ್ನು ಕುರಿತು, 'ಜಾನ್ ನಾನಿನ್ನು ಹೆಚ್ಚು ದಿವಸ ಬದುಕುವುದಿಲ್ಲ. ನನ್ನ ಮಗನ ಸಂಪೂರ್ಣ ಜವಾಬ್ದಾರಿ ಇನ್ನು ನಿನ್ನದು. ಇಷ್ಟು ದಿನ ತಾಯಿಯಾಗಿ ಪೋಷಿಸಿದೆ. ಇನ್ನು ಮುಂದೆ ತಂದೆಯೋಪಾದಿಯಲ್ಲಿದ್ದು ಅವನ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಪ್ಪ' ಎಂದು ಅವನ ಕೈ ಹಿಡಿದು ಕಣ್ಣೀರುಗರೆದನು. ಜಾನ್ ನಮ್ರತೆಯಿಂದ, 'ಆಗಲಿ ಪ್ರಭು, ನಾನು ನನ್ನ ಪ್ರಾಣವನ್ನು ಪಣಕ್ಕಿಟ್ಟು ರಾಜಕುಮಾರನನ್ನು ನಿಷ್ಠೆಯಿಂದ ನೋಡಿಕೊಳ್ಳುತ್ತೇನೆ. ನೀವು ನಿಶ್ಚಿಂತರಾಗಿ' ಎಂದು ಮಾತು ಕೊಟ್ಟನು.

'ನೀನು ಅವನಿಗೆ ನನ್ನ ಅರಮನೆ, ಅದರಲ್ಲಿರುವ ಎಲ್ಲ ಕೋಣೆಗಳು, ತುಂಬಿರುವ ಎಲ್ಲ ಐಶ್ವರ್ಯ ಎಲ್ಲವನ್ನೂ ತೋರಿಸಿ ಪರಿಚಯ ಮಾಡಿಕೊಡು. ಆದರೆ ಮೇಲಿನ ಅಂತಸ್ತಿನಲ್ಲಿರುವ, ಚಿನ್ನದ ಮಾಳಿಗೆಯುಳ್ಳ ಅರಮನೆಯ ರಾಜನ ಮಗಳ ಚಿತ್ರವನ್ನು ತೂಗು ಹಾಕಿರುವ ಕೋಣೆಯನ್ನು ಮಾತ್ರ ತೋರಿಸಬೇಡ. ಆ ರಾಜಕುಮಾರಿಯ ಚಿತ್ರವನ್ನು ಕಂಡಲ್ಲಿ ರಾಜಕುಮಾರ ಅವಳಲ್ಲಿ ಮೋಹಗೊಂಡು ಮುಂದೆ ತುಂಬಾ ತೊಂದರೆಗೀಡಾಗುತ್ತಾನೆ. ನೆನಪಿರಲಿ ಜಾನ್. ಅವನಿಗೆ ಆ ಚಿತ್ರವನ್ನು ಮಾತ್ರ ತೋರಿಸಬೇಡ' ಎಂದು ಹೇಳಿ, ಮತ್ತೆ ಸ್ವಲ್ಪ ದಿನಗಳಲ್ಲಿ ರಾಜ ತೀರಿಹೋದನು.

ರಾಜನಿಗೆ ಮಾತು ಕೊಟ್ಟಂತೆ ಜಾನ್ ರಾಜಕುಮಾರನನ್ನು ಯೋಗ್ಯರೀತಿಯಲ್ಲಿ ನೋಡಿಕೊಳ್ಳುತ್ತಿದ್ದನು. ಒಂದು ದಿನ 'ಬಾ ರಾಜಕುಮಾರ, ನಿನಗೆ ನಿನ್ನ ತಂದೆಯ ಅರಮನೆಯನ್ನು ಪೂರ್ತಿ ತೋರಿಸುತ್ತೇನೆ' ಎಂದು ಕರೆದೊಯ್ದು ಎಲ್ಲ ಕೋಣೆಗಳಲ್ಲೂ ತುಂಬಿದ ಸಂಪತ್ತನ್ನು ತೋರಿಸಿದನು. ಆದರೆ ಬೀಗ ಹಾಕಿದ್ದ ಒಂದು ಕೋಣೆಯ ಬಗ್ಗೆ ಮಾತ್ರ ಏನೂ ಹೇಳದೆ ಮುಂದೆ ಸರಿದನು. ರಾಜಕುಮಾರ ತಟ್ಟನೆ ನಿಂತು.'ಜಾನ್, ಈ ಕೋಣೆಯ ಬೀಗ ತೆಗಿ. ಇದರಲ್ಲಿ ಏನಿದೆಯೆಂದು ನೋಡೋಣ' ಎಂದನು,

'ಬೇಡ ರಾಜಕುಮಾರ. ನೀವು ಹೆದರುತ್ತೀರಿ' ಎಂದನು ಜಾನ್.

'ಹೂಂ ಹೆದರಿಕೆ ನನಗೆ! ತೆಗಿ ನಾನು ನೋಡಲೇ ಬೇಕು.'

'ನಾನು ನಿಮ್ಮ ತಂದೆಯವರಿಗೆ ಮಾತು ಕೊಟ್ಟಿದ್ದೇನೆ. ಆ ಕೋಣೆಯನ್ನು ಹೊಕ್ಕರೆ ಅದರಲ್ಲಿರುವುದನ್ನು ಕಂಡು ನಾವಿಬ್ಬರೂ ತೊಂದರೆಗೆ ಸಿಕ್ಕಿಕೊಳ್ಳುತ್ತೇವೆ.'